
# ಸಾಹಿತ್ಯ–ಜೀವನ ಮತ್ತು ವೈವಿಧ್ಯ

ಕನ್ನಡಪರ ಹೋರಾಟ ಮತ್ತು ಸಾಹಿತ್ಯ ಸೃಷ್ಟಿಯನ್ನು ತಮ್ಮ ಬದುಕು, ಉಸಿರಿನ ಭಾಗವಾಗಿಸಿಕೊಂಡಿದ್ದ ಚಂದ್ರಶೇಖರ ಪಾಟೀಲರು ಈ ಬದುಕಿನಿಂದ ನಿರ್ಗಮಿಸಿದ್ದಾರೆ. ಹೋರಾಟ, ಬರವಣಿಗೆ ಎರಡೂ ಬೇರೆ ಬೇರೆ ಅಲ್ಲದ ಸಾಹಿತಿಗಳ ತಲೆಮಾರಿಗೆ ಚಂಪಾ ಸೇರಿದವರಾಗಿದ್ದರು. ಬಹುಶಃ ಆ ತಲೆಮಾರಿನ ಕೊನೆಯ ಕೊಂಡಿಗಳಲ್ಲಿ ಅವರೊಬ್ಬರು. ಅದು ಈಗ ಕಳಚಿದೆ. ಬಂಡಾಯ ಸಾಹಿತ್ಯ ಸಂಘಟನೆಗೆ ಕಸುವು ತುಂಬಿದ, ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಜೈಲಿಗೆ ಹೋದ, ಗೋಕಾಕ್ ಚಳವಳಿಯಲ್ಲಿ ಮುಂಚೂಣಿಯಲ್ಲಿದ್ದ ಚಂಪಾ ಅವರಿಗೆ ಹೋರಾಟ ಸಾಹಿತ್ಯದ ವಿಸ್ತರಣೆ ಮಾತ್ರ ಆಗಿರಲಿಲ್ಲ. ಅವೆರಡೂ ಒಂದೇ ಆಗಿದ್ದವು.



ಹೋರಾಟದೊಂದಿಗೆ ನಿರಂತರವಾಗಿ ಬರೆಯುತ್ತ ಬಂದ ಚಂಪಾ ಅವರ ಬರಹಗಳು ತಮ್ಮ ವ್ಯಂಗ್ಯ–ವಿಡಂಬನೆ, ಅಸಂಗತ ಗುಣದಿಂದಾಗಿ ವಾಚಕರ ಗಮನವನ್ನು ಸೆಳೆದವು. ಕನ್ನಡದ ಉತ್ತಮ ಕವಿ, ನಾಟಕಕಾರರಾದ ಅವರು ಕಾವ್ಯದೊಂದಿಗೆ ಅನನ್ಯ ಗದ್ಯವನ್ನೂ ಸೃಷ್ಟಿಸಿದ್ದಾರೆ. ವ್ಯವಸ್ಥೆ ಮತ್ತು ಕನ್ನಡ ಸಾಹಿತಿಗಳನ್ನು ಆಗಾಗ ಚಂಪಾ ಕುಟುಕುತ್ತ, ಎಚ್ಚರಿಸುತ್ತ ಬಂದಿದ್ದರು. ಸಾಹಿತಿಗಳು ತಮ್ಮ ವ್ಯಕ್ತಿತ್ವದ ವಕ್ರತೆಯನ್ನು ನೋಡಿಕೊಳ್ಳುವ ಕನ್ನಡಿ ಅವರ ಮಾತು–ಬರವಣಿಗೆಯಲ್ಲಿತ್ತು. ಜೊತೆಗೆ, ಅವರು ಸಂಪಾದಕರಾಗಿದ್ದ 'ಸಂಕ್ರಮಣ' ಪತ್ರಿಕೆ ಸಾಹಿತ್ಯದ ಹಲವು ವಾಗ್ವಾದಗಳಿಗೆ ವೇದಿಕೆಯಾಗಿತ್ತು. ತಾವು ಇರುವಷ್ಟು ಕಾಲ ಸಾಂಸ್ಕೃತಿಕ ವಾತಾವರಣವನ್ನು ಜೀವಂತವಾಗಿಟ್ಟ ಕೆಲವೇ ಸಾಹಿತಿಗಳಲ್ಲಿ ಅವರೂ ಒಬ್ಬರು. ಕನ್ನಡ ಸಾಂಸ್ಕೃತಿಕ ಲೋಕ ಚಂಪಾ ಅವರ ಕಿಡಿನುಡಿಗಳಿಗೆ ಸದಾ ಕಿವಿದೆರೆದಿರುತ್ತಿತ್ತು. ಇಂತಹ ವಿಶಿಷ್ಟ ಸಾಹಿತಿಯ ಬದುಕು–ವ್ಯಕ್ತಿತ್ವ–ಸಾಹಿತ್ಯ–ಸಾಧನೆಯ ಬಗ್ಗೆ ಹಿರಿಯ ಲೇಖಕ ಮತ್ತು ಅವರ ಒಡನಾಡಿ ಬರಗೂರು ರಾಮಚಂದ್ರಪ್ಪ ಬರೆದಿದ್ದಾರೆ. ಬಸವರಾಜ ಸಾದರ ಅವರು ಮಾಡಿದ ಚಂಪಾ ಅವರ ಅಪರೂಪದ ಪುಟ್ಟ ಸಂದರ್ಶನವೂ ಈ ಲೇಖನದೊಂದಿಗಿದೆ.

ಅಮೆರಿಕದ ಪ್ರತಿಭಾವಂತ ಕಾದಂಬರಿಗಾರ್ತಿ ಟೋನಿ ಮಾರಿಸನ್ ಅವರ ಸಂದರ್ಶನ ಈ ಸಂಚಿಕೆಯ ವಿಶೇಷಗಳಲ್ಲೊಂದು. ಸಾಹಿತ್ಯಕ್ಕಾಗಿನ ನೊಬೆಲ್ ಪ್ರಶಸ್ತಿ ಪಡೆದ ಮಾರಿಸನ್ ತಮ್ಮ ಕಾದಂಬರಿಗಳು, ಬರವಣಿಗೆಯ ಕಸುಬುದಾರಿಕೆಯ ಕುರಿತು ಮಾತನಾಡಿದ್ದಾರೆ. ಸಾಹಿತ್ಯ ಸೃಷ್ಟಿಯ ಕುರಿತ ನಿಖರ ಗ್ರಹಿಕೆಗಳು, ಬರವಣಿಗೆಯ ಬಗೆಗಿನ ಎಚ್ಚರ ಅವರನ್ನು ಉತ್ತಮ ಸಾಹಿತಿಯನ್ನಾಗಿ ರೂಪಿಸಿವೆ. ಈ ಸಂದರ್ಶನ ಓದುಗರಿಗೆ ವಿಶಿಷ್ಟ ಹೊಳಹುಗಳನ್ನು ಕೊಡುವಂತಿದೆ.

ಜಿ.ಎಸ್. ಜಯದೇವ ಅವರ ಅನುಭವ ಕಥನ 'ಜೇನು ಇಳಿಸಿದ ಪ್ರಸಂಗ' ಈ ಸಂಚಿಕೆಯಲ್ಲಿದೆ. ಅದು ಹೆಮ್ಮರಗಳ ತುದಿಯಲ್ಲಿ ಕಟ್ಟಿದ ಜೇನುಗೂಡುಗಳಿಂದ ತುಪ್ಪವನ್ನು ತೆಗೆಯುವ ಕಾಡಿನ ಜೀವಿಗಳಾದ ಸೋಲಿಗರ ಕುಶಲತೆ, ಅವರ ಪಾರಂಪರಿಕ ಜ್ಞಾನ–ವಿಜ್ಞಾನವನ್ನು ಪರಿಚಯಿಸುತ್ತದೆ. ಸೂಕ್ಷ್ಮ ಮತ್ತು ವಿಶಿಷ್ಟ ವಿವರಗಳ ಈ ಬರಹ ನಾಡಿನ ಜನಪದರಲ್ಲಿರುವ ಅಗಾಧ ಜ್ಞಾನಕ್ಕೆ ತೋರುಬೆರಳಿನಂತಿದೆ. ವಸ್ತು ವೈವಿಧ್ಯವಿರುವ ಈ ಬಗೆಯ ಬರಹಗಳನ್ನು 'ಮಯೂರ'ದ ಮುಂದಿನ ಸಂಚಿಕೆಗಳಲ್ಲೂ ಓದುಗರು ನಿರೀಕ್ಷಿಸಬಹುದು.

**ಮಯೂರ ಬಳಗ**